ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ

ಸಾಕ್ಷಿಗೆ ದಿನಾಂಕಃ **21-11-2023** ರಂದು ಪ್ರಮಾಣ ವಚನ ಬೋಧಿಸಲಾಯಿತು

C.C.No.1595/2013
CW- 5 PW- 5

ಸಾಕ್ಷಿದಾರರ ಹೆಸರು - ತವನಪ್ಪಾ ಬಸಪ್ಪಾ ಬಿಲ್ಲ

ವಯಸ್ಸು - 53 ವರ್ಷ

ಉದ್ಯೋಗ - ಶಿಕ್ಷಕರು, ಸರಕಾರಿ ಪದವಿ ಪೂರ್ವ ಮಹಾವಿದ್ಯಾಲಯ ಗೋಕಾಕ

ಸಾಕೀನ - ಗೋಕಾಕ

ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ಪ್ರಾಥಮಿಕ ಶಾಲಾ ಶಿಕ್ಷಕರಿಗೆ ತರಬೇತಿ ಕೊಡುದಕ್ಕಾಗಿ ಕ್ಷೇತ್ರ ಸಂಪನ್ಮೂಲ ವ್ಯಕ್ತಿಯೆಂದು 2012 ರಿಂದ 2013 ರವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ. ನಂತರ ನನ್ನನ್ನು ಸರಕಾರಿ ಪದವಿ ಪೂರ್ವ ಮಹಾವಿದ್ಯಾಲಯ ಗೋಕಾಕಿಗೆ ಶಿಕ್ಷಕನೆಂದು ವರ್ಗಾವಣೆ ಮಾಡಿರುತ್ತಾರೆ.

ನನಗೆ ಚಾಸಾ-1, 4 ಮತ್ತು 6 ರವರ ಪರಿಚಯವಿದೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯ ಪರಿಚಯವಿಲ್ಲ. 2013 ನೇ ಸಾಲಿನಲ್ಲಿ ಕರ್ನಾಟಕ ವಿಧಾನ ಸಭಾ ಚುನಾವಣೆ ಇದ್ದುದ್ದರ ಕಾರಣ ನನಗೆ ಗೋಕಾಕ ನಗರದಲ್ಲಿ ವಿಡಿಯೋ ಸರ್ವೈವರ ಎಂದು ಚುನಾವಣಾ ಅಧಿಕಾರಿಗಳು ನೇಮಕ ಮಾಡಿದ್ದರು. ದಿಃ 05-04-2013 ರಂದು ಚಾಸಾ-4 ರವರು ನಮಗೆ ಕರೆಯಿಸಿ ಗೋಕಾಕ ನಗರದ ತಹಶೀಲ್ದಾರ ಕಚೇರಿಯ ಎದುರುಗಡೆ ಚುನಾವಣೆ ನೀತಿ ಸಂಹಿತೆ ಉಲ್ಲಂಘನೆ ಮಾಡಿ ಸಭೆ ಮಾಡುತ್ತಿದ್ದಾರೆ ಹೋಗಿ ವಿಡಿಯೋ ಮಾಡಿಕೊಂಡು ಬರಬೇಕು ಎಂದು ತಿಳಿಸಿದ ಮೇರೆಗೆ ನಾನು ಮತ್ತು ಚಾಸಾ-6 ರವರು ಬೆಳಿಗ್ಗೆ 11-00 ರಿಂದ 12-00 ಗಂಟೆಯ ಅವಧಿಯಲ್ಲಿ ತಹಶೀಲ್ದಾರ ಕಚೇರಿ ಎದುರುಗಡೆ ನಡೆಯುತ್ತಿದ್ದ ಕಾರ್ಯಕ್ರಮದ ಬಳಿ ಹೋಗಿ ವಿಡಿಯೋ ಮಾಡಿಕೊಂಡು ಚಾಸಾ-4 ರವರಿಗೆ ನೀಡಿರುತ್ತೇನೆ.

ನ್ಯಾಯಾಲಯದ ಮುಂದೆ ಇರುವ ಆರೋಪಿಯ ಕುರಿತು ನನಗೆ ಯಾವದೇ ಮಾಹಿತಿ ಇಲ್ಲಾ. ಪೋಲಿಸರು ನನ್ನಿಂದ ಹೇಳಿಕೆ ಪಡೆದಿರುತ್ತಾರೆ. ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಸಸಅ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸಸಅ ರವರಿಂದ

ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿ ಗೋಕಾಕದಲ್ಲಿ ಮತದಾರರ ಜಾಗೃತ ವೇದಿಕೆಯ ಅಧ್ಯಕ್ಷನಾದ ಬಾಳಯ್ಯಾ ಮಲ್ಲಯ್ಯಾ ಕಂಬಿ ಇರುತ್ತಾನೆ ಎಂದರೆ ಸರಿ. ಆರೋಪಿ ಮಾನ್ಯ ತಹಶೀಲ್ದಾರ ಗೋಾಕಕರವರಿಂದ ಅನುಮತಿ ಪಡೆದುಕೊಂಡು ದಿಃ 05-04-2013 ರಂದು ಗೋಕಾಕರ ಶಹರದಲ್ಲಿ ಮತದಾರರ ಜಾಗೃತಾ ವೇದಿಕೆಯಿಂದ ಮೆರವಣಿಗೆ ಹಾಗೂ ಕಾರ್ಯಕ್ರಮ ಹಮ್ಮಿಕೊಂಡಿದ್ದಾ ಎಂದರೆ ಸರಿ. ಆರೋಪಿ ಚುನಾವಣಾ ನೀತಿ ಸಂಹಿತೆಯ ಪ್ರಕಾರ ತಹಶೀಲ್ದಾರ ಗೋಕಾಕ ಇವರು ನೀಡಿದ ಷರತ್ತುಗಳನ್ನು ಉಲ್ಲಂಘಿಸಿ ಸದರಿ ಮೆರವಣಿಗೆ ಹಾಗೂ ಕಾರ್ಯಕ್ರಮದಲ್ಲಿ ರಾಜಕೀಯ ವ್ಯಕ್ತಿಗಳಿಗೆ ಭಾಗವಹಿಸಲು ಅವಕಾಶ ಮಾಡಿಕೊಟ್ಟಿದ್ದಾ ಎಂದರೆ ಸರಿ. ಗೋಕಾಕ ತಹಶೀಲ್ದಾರ ಕಚೇರಿ ಮುಂದೆ ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿ ರಾಜಕೀಯ ವ್ಯಕ್ತಿಗಳಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಟ್ಟು ಚುನಾವಣಾ ನೀತಿ ಸಂಹಿತೆಯನ್ನು ಉಲ್ಲಂಘನೆ ಮಾಡಿದ್ದು ನಮಗೆ ಕಂಡು ಬಂದಿದ್ದರಿಂದ ನಾನು ವಿಡಿಯೋ ಗ್ರಾಪರ ಕಡೆಯಿಂದ ವಿಡಿಯೋ ಸಿಡಿ ಮಾಡಿಸಿ ಚಾಸಾ-4 ರವರಿಗೆ ಕೊಟ್ಟಿದ್ದೆ ಎಂದರೆ ಸರಿ. ಈ ಕುರಿತು ಚಾಸಾ-1 ರವರು ಆರೋಪಿಯ ವಿರುದ್ಧ ದೂರು ಸಲ್ಲಿಸಿದ ವಿಷಯ ನನಗೆ ಗೊತ್ತಾಗಿತ್ತು ಎಂದರೆ ಸರಿ. ತನಿಖಾಧಿಕಾರಿಗಳ ಮುಂದೆ ನಾನು ದಿಃ12-04-2013 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಸದರಿ ದಿನ ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿ ಚುನಾವಣೆ ನೀತಿ ಸಂಹಿತೆ ಉಲ್ಲಂಘನೆ ಮಾಡಿದ ವ್ಯಕ್ತಿಯಾಗಿದ್ದಾ ಎಂದರೆ ಸಾಕ್ಷಿಯು ನನಗೆ ಗುರುತಿಸಲು ಆಗುತ್ತಿಲ್ಲಾ ಎಂದು ನುಡಿಯುತ್ತಾರೆ. ನಾನು ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎನ್ ಬಿ ಟಿ ರವರಿಂದಃ

ಮಾರ್ಚ 2013 ರಲ್ಲಿ ನನಗೆ ಗೋಕಾಕ ವಿಧಾನ ಸಭಾ ಚುನಾವಣೆಯ ವಿಡಿಯೋ ಸರ್ವೈವರ್ ಎಂದು ಚುನಾವಣಾ ಅಧಿಕಾರಿಗಳು ನೇಮಕ ಮಾಡಿದ್ದರು. ಗೋಕಾಕ ಚುನಾವಣಾ ವ್ಯಾಪ್ತಿಯಲ್ಲಿ ಚಾಸಾ-4 ರವರು ಕಳುಹಿಸಿದ್ದಲ್ಲಿ ನಾವು ಹೋಗಿ ವಿಡಿಯೋ ಮಾಡಿಕೊಂಡು ಬಂದು ಚಾಸಾ-4 ರವರಿಗೆ ನೀಡುತ್ತಿದ್ದೇವು.

ದಿಃ 05-04-2013 ರಂದು ಬೆಳಿಗ್ಗೆ ಗೋಕಾಕ ನಗರದ ಲಕ್ಷ್ಮೀ ಟಾಕೀಸ್ ಬಳಿ ಒಂದು ಮೆರವಣಿಗೆ ಹೋಗುತ್ತಿದ್ದು ಆ ಕುರಿತು ನಾವು ವಿಡಿಯೋ ಮಾಡಿಕೊಳ್ಳುತ್ತಿದೇವು, ನಂತರ ಚಾಸಾ-4 ರವರು ನಮಗೆ ಕರೆ ಮಾಡಿ ತಹಶೀಲ್ದಾರ ಕಚೇರಿಯ ಬಳಿ ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಮಾಡಿ ಸಭೆ ಮಾಡುತ್ತಿದ್ದಾರೆ ಅಲ್ಲಿಯು ಸಹ ವಿಡಿಯೋ ಮಾಡಿಕೊಳ್ಳಲು ತಿಳಿಸಿದ ಮೇರೆಗೆ ಅಲ್ಲಿ ಹೋಗಿ ವಿಡಿಯೋ ಮಾಡಿಕೊಂಡಿರುತ್ತೇವೆ. ಚಾಸಾ-4 ರವರು ಸದರಿ

ದಿನದಂದು ಬೆಳಿಗ್ಗೆ ಅಂದಾಜು 11-00 ಗಂಟೆಗೆ ಕರೆ ಮಾಡಿದ್ದರು. ನಮಗೆ ಕರೆ ಬಂದ 10 ರಿಂದ 15 ನಿಮಿಷದ ಒಳಗಾಗಿ ತಹಶೀಲ್ದಾರ ಕಚೇರಿ ಬಳಿ ಬಂದಿರುತ್ತೇವೆ. ನಾನು ಹಾಗೂ ಚಾಸಾ-6 ರವರು ತಹಶೀಲ್ದಾರ ಕಚೇರಿ ಬಳಿ ಬರುವಷ್ಟರಲ್ಲಿ ಅಲ್ಲಿ ಒಂದು ಕಾರ್ಯಕ್ರಮ ನಡೆಯುತ್ತಿತ್ತು ಅದರ ವಿಡಿಯೋ ಮಾಡಿಕೊಂಡಿರುತ್ತೇವೆ. ಗೋಕಾಕಿನ ತಹಶೀಲ್ದಾರ ಕಚೇರಿ ಬಳಿ ಸಾಮಾನ್ಯವಾಗಿ ನೂರಾರು ಜನ ಇರುತ್ತಾರೆ ಎಂದರೆ ಸರಿ. ಗುಂಪುಕಟ್ಟಿ ಮಾತನಾಡುತ್ತಿರುವ ವ್ಯಕ್ತಿಗಳ ವಿಡಿಯೋ ನಾವು ಚಿತ್ರಿಕರಣ ಮಾಡಿಕೊಂಡಿರುತ್ತೇವೆ. ಸದರಿ ಸಂಗತಿಯನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-6 ರವರು ನನ್ನ ಸಮಕ್ಷಮ ವಿಡಿಯೋ ಮಾಡಿರುತ್ತಾರೆ. ನಾನು ಮತ್ತು ಚಾಸಾ-6 ರವರು ಸಭೆ ಸೇರಿ ಕಾರ್ಯಕ್ರಮ ಮಾಡುವವರ ಚಿತ್ರಿಕರಣವನ್ನು ಮಾಡಿಕೊಂಡಿರುತ್ತೇವೆ. ನಾನು ಚಾಸಾ-6 ರವರ ಕಡೆಯಿಂದ ಅವರ ಪ್ರಮಾಣ ಪತ್ರವನ್ನು ಪಡೆದಿರುವುದಿಲ್ಲಾ ಎಂದರೆ ಸರಿ. ಚಾಸಾ-6 ರ ಪ್ರಮಾಣ ಪತ್ರವನ್ನು ಚಾಸಾ-4 ರವರಿಗೆ ನಾನು ನೀಡಿರುವುದಿಲ್ಲಾ ಎಂದರೆ ಸರಿ. ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

**(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೆ. ಕೇ. ಸರಿ ಇದೆ,**

**Sd/-**

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.

ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ

ಸಾಕ್ಷಿಗೆ ದಿನಾಂಕಃ **21-11-2023** ರಂದು ಪ್ರಮಾಣ ವಚನ ಬೋಧಿಸಲಾಯಿತು

C.C.No.1595/2013
CW- 4 PW- 4

| | | |
|---|---|---|
| ಸಾಕ್ಷಿದಾರರ ಹೆಸರು | - | ವೆಂಕಟೇಶ ರಾಮಚಂದ್ರ ಸಂಕ್ರಿ |
| ವಯಸ್ಸು | - | 68 ವರ್ಷ |
| ಉದ್ಯೋಗ | - | ನಿವೃತ್ತ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತಿ ಗೋಕಾಕ |
| ಸಾಕೀನ | - | ಗೋಕಾಕ |

ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ಗೋಕಾಕ ತಾಲೂಕ ಪಂಚಾಯತಿಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿ ಎಂದು 2016 ರಿಂದ 2018 ರವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ.

ನನಗೆ ಚಾಸಾ-1 ರಿಂದ 3, 5 ರಿಂದ 7 ರವರ ಪರಿಚಯವಿದೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯ ಪರಿಚಯವಿದೆ. 2013 ನೇ ಸಾಲಿನಲ್ಲಿ ಕರ್ನಾಟಕ ವಿಧಾನ ಸಭಾ ಚುನಾವಣೆ ಇದ್ದುದ್ದರ ಕಾರಣ ನನಗೆ ಗೋಕಾಕ ನಗರದಲ್ಲಿ ವಿಡಿಯೋ ವಿವಿಂಗ್ ಟೀಮಿನ ಮುಖ್ಯಸ್ಥನೆಂದು ಚುನಾವಣಾ ಅಧಿಕಾರಿ ನೇಮಕ ಮಾಡಿದ್ದರು. ನನ್ನ ಕೆಳಗೆ ಚಾಸಾ-5 ಮತ್ತು 6 ರವರು ಕೆಲಸ ಮಾಡುತ್ತಿದ್ದರು. ನಾನು ಚಾಸಾ-5 ರವರಿಗೆ ಗೋಕಾಕ ನಗರದಲ್ಲಿ ಚುನಾವಣೆ ನೀತಿ ಸಂಹಿತೆ ಉಲ್ಲಂಘನೆ ಮಾಡುವವರ ವಿಡಿಯೋಗ್ರಾಫಿ ಮಾಡಿಕೊಂಡು ನನ್ನ ಮುಂದೆ ಹಾಜರಪಡಿಸಬೇಕು ಎಂದು ತಿಳಿಸಿದ್ದೆ.

ದಿಃ 05-04-2013 ರಂದು ಮದ್ಯಾಹ್ನ 12-00 ಗಂಟೆಗೆ ಚುನಾವಣೆ ನೀತಿ ಸಂಹಿತೆಯನ್ನು ಆರೋಪಿ ಉಲ್ಲಂಘನೆ ಮಾಡಿ ಭಾಷಣ ಮಾಡಿದ್ದರ ಕುರಿತು ಚಾಸಾ-5 ರವರು ವಿಡಿಯೋ ಮಾಡಿಕೊಂಡು ಸಿಡಿ ಮಾಡಿಕೊಂಡು ಬಂದು ನನ್ನ ಕಡೆಗೆ ಕೊಟ್ಟಿದ್ದು, ನಾನು ವಿಡಿಯೋವನ್ನು ವಿಕ್ಷಣೆ ಮಾಡಿ ಚುನಾವಣೆ ನೀತಿ ಸಂಹಿತೆ ಉಲ್ಲಂಘನೆಯಾಗಿರುವದನ್ನು ಗಮನಿಸಿ ಮುಂದಿನ ಕ್ರಮಕ್ಕಾಗಿ ನನ್ನ ವರದಿ ಹಾಗೂ

ಸಿಡಿಯನ್ನು ತಹಶೀಲ್ದಾರ ಗೋಕಾಕರವರಿಗೆ ನೀಡಿರುತ್ತೇನೆ. ನಾನು ಈ ಘಟನೆಯ ಕುರಿತು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎನ್ ಬಿ ಟಿ ರವರಿಂದಃ</u>

ನನಗೆ ವೀಡಿಯೋ ವೀವಿಂಗ್ ಟೀಮಿನ ಮುಖ್ಯಸ್ಥನೆಂದು ಯಾವ ದಿನಾಂಕದಂದು ನೇಮಕ ಮಾಡಿದ್ದರು ಎಂದು ನನಗೆ ಈಗ ನೆನಪಿಲ್ಲ. ನನಗೆ ಸಂಪೂರ್ಣ ಗೋಕಾಕ ವಿಧಾನಸಭಾ ಕ್ಷೇತ್ರದ ವೀಡಿಯೋ ವೀವಿಂಗ್ ಟೀಮಿನ ಮುಖ್ಯಸ್ಥನೆಂದು ನೇಮಕ ಮಾಡಿದ್ದರು. ನನ್ನ ಕೈಕೆಳಗೆ ಚಾಸಾ-5 ಮತ್ತು 6 ರವರು ಮಾತ್ರ ಕೆಲಸ ಮಾಡುತ್ತಿದ್ದರು. ಚಾಸಾ-5 ಮತ್ತು 6 ರವರು ಪ್ರತಿ ದಿನ ಚುನಾವಣಾ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರು. ನಮ್ಮ ಕಚೇರಿ ಮತ್ತು ಚುನಾವಣಾ ಮುಖ್ಯಸ್ಥರ ಕಚೇರಿ ಬೇರೆ ಬೇರೆ ಎಂದರೆ ಸರಿ. ವೀಡಿಯೋ ವೀವಿಂಗ್ ಟೀಮಿನ ಸದಸ್ಯರು ವಿಕ್ಷಣೆ ಮಾಡಲು ನನ್ನ ಅನುಮತಿ ಪಡೆಯದೇ ಹೋಗುತ್ತಿದ್ದರು ಎಂದರೆ ಸರಿಯಲ್ಲ.

ದಿಃ 05-04-2013 ರಂದು ಬೆಳಿಗ್ಗೆ 10-00 ಗಂಟೆಗೆ ಚಾಸಾ-5 ಮತ್ತು 6 ರವರನ್ನು ಕರೆಯಿಸಿ ನಾನು ಚುನಾವಣಾ ನೀತಿ ಸಂಹಿತೆ ಉಲ್ಲಂಘಿಸುವವರ ವಿಡಿಯೋ ಮಾಡಲು ತಿಳಿಸಿದ್ದೆ. ಸದರಿ ದಿನ ಬೆಳಿಗ್ಗೆ 9-30 ಗಂಟೆಗೆ ತಹಶೀಲ್ದಾರ ಕಚೇರಿಯಿಂದ ನನಗೆ ತಹಶೀಲ್ದಾರ ಕಚೇರಿಯಿಂದ ಕರೆ ಬಂದು ತಹಶೀಲ್ದಾರ ಕಾರ್ಯಾಲಯದ ಎದುರುಗಡೆ ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಮಾಡುತ್ತಾ ಕಾರ್ಯಕ್ರಮ ಮಾಡುತ್ತಿದ್ದಾರೆ ಹೀಗಾಗಿ ವಿಡಿಯೋ ಮಾಡಿಕೊಳ್ಳಲು ಬರಬೇಕು ಎಂದು ತಿಳಿಸಿದ್ದರು. ಸದರಿ ಸಂಗತಿಯನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಹಶೀಲ್ದಾರ ಕಚೇರಿಯ ಎದುರುಗಡೆ ಯಾವ ವ್ಯಕ್ತಿಗಳು ಯಾವ ಕಾರ್ಯಕ್ರಮ ಮಾಡುತ್ತಿದ್ದಾರೆ ಎಂಬುದು ನನಗೆ ಪೋನಿನಲ್ಲಿ ತಿಳಿಸಿರಲಿಲ್ಲಾ.

ಚಾಸಾ-5 ಮತ್ತು 6 ರವರು ವಿಡಿಯೋ ಮಾಡಿಕೊಂಡು ಮದ್ಯಾಹ್ನ 3-00 ಗಂಟೆಗೆ ನನಗೆ ನೀಡಿರುತ್ತಾರೆ. ಸದರಿ ಸಂಗತಿಯನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಿನದಂದು ನಾನು ಸಾಯಂಕಾಲ 5-00 ಗಂಟೆಗೆ ತಹಶೀಲ್ದಾರ

ಗೋಕಾಕ ರವರಿಗೆ ನನ್ನ ವರದಿ ಮತ್ತು ಸಿಡಿಯನ್ನು ನೀಡಿರುತ್ತೇನೆ. ನಾನು ಆರೋಪಿಯನ್ನು ವಿಡಿಯೋದಲ್ಲಿ ಮಾತ್ರ ನೋಡಿರುತ್ತೇನೆ. ಆರೋಪಿಯ ಹೆಸರು ಬಾಳಯ್ಯಾ ಕಂಬಿ ಇರುತ್ತದೆ ಎಂದು ನನಗೆ ನಿಖರವಾಗಿ ಗೊತ್ತಿರಲಿಲ್ಲಾ ಎಂದರೆ ಸರಿ. ನಾನು ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ವರದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

**(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೆ. ಕೇ. ಸರಿ ಇದೆ,**

**Sd/-**
(ರಾಜೀವ ಗೋಳಸಾರ)
ಪ್ರ.ದಿ.&ನ್ಯಾ.ದಂ., ಗೋಕಾಕ.